# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 260 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 22.04.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 260 • PRGI No:KARKAN/2023/88055 • VIJAYANAGARA • 22.04.2025 • Tuesday • Page:04 • Rs:2



Good Opportunity for Branding
1,25,000+
Digital E-PAPER READERS



No.1 HAMPI TIMES LEADING PRINT & DIGITAL District News Paper
Call Us for Advertisements: 9448633038


## ನಿನಗೆ ನೀನೇ ಬೆಳಕು

ಸಾಧನೆಗೆ ಮಾರ್ಗವಿರುವುದು
ಪರಿಶ್ರಮದ
ಹಾದಿಯಲ್ಲಿ ಮಾತ್ರ

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

# ಜನಿವಾರ ತೆಗೆಸಿ ಹಿಂದೂಗಳನ್ನ ಅಪಮಾನಿಸಿದೆ

### ಬ್ರಾಹ್ಮಣ ಸಂಘ ಹಾಗೂ ಇತರ ಹಿಂದೂ ಸಮಾಜಗಳಿಂದ ಆಕ್ರೋಶ | ವಿದ್ಯಾರ್ಥಿ ಕನಸು ನುಚ್ಚುನೂರು | ತನಿಖೆಗೆ ಆಗ್ರಹ






■ **ಹಂಪಿ ಟೈಮ್ಸ್ ಹೊಸಪೇಟೆ**

ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಜನಿವಾರ ತೆಗೆಸಿ, ಅವಮಾನ, ಅಪಮಾನ ಮಾಡಿರುವ ನಡೆಯನ್ನು ಖಂಡಿಸಿ ಹೊಸಪೇಟೆ ತಾಲೂಕು ಬ್ರಾಹ್ಮಣ ಸಂಘ ಹಾಗೂ ನಗರದ ವಿವಿಧ ಸಮುದಾಯಗಳ ಮುಖಂಡರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿ, ರಾಜ್ಯಾದ್ಯಂತ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ಬರೀ ಪರೀಕ್ಷಾ ಕೇಂದ್ರದ ಮುಖ್ಯಸ್ಥ ಅಥವಾ ಗೃಹರಕ್ಷಕರನ್ನು ಅಮಾನತ್ತು ಮಾಡುವ ಮೂಲಕ ಸರ್ಕಾರ ಕಣ್ಣೊರೆಸುವ ತಂತ್ರ ಮಾಡುತ್ತಿದೆ, ಈ ಘಟನೆಯ ಮೂಲ ಕಾರಣೀಕರ್ತರನ್ನು ಪತ್ತೆಹಚ್ಚಿ ಸೂಕ್ತ ಕ್ರಮಕೈಗೊಳ್ಳಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರ ಮೂಲಕ ಸಿಎಂಗೆ ಮನವಿ ಸಲ್ಲಿಸಿದರು.

ಹೊಸಪೇಟೆ ಬ್ರಾಹ್ಮಣ ಸಂಘದ ಅಧ್ಯಕ್ಷ ದಿವಾಕರ ಮಾತನಾಡಿ, ಜನಿವಾರ ತೆಗೆಯಲು ಒಪ್ಪದ ವಿದ್ಯಾರ್ಥಿಗೆ ಪರೀಕ್ಷೆ ಕೇಂದ್ರ ಪ್ರವೇಶಕ್ಕೂ ಅವಕಾಶ ನೀಡದ್ದರಿಂದ ವಿದ್ಯಾರ್ಥಿ ಭವಿಷ್ಯದ ಕನಸು ನುಚ್ಚುನೂರಾಗಿದೆ. ಸಿಇಟಿ ಫಲಿತಾಂಶದ ಮೇಲೆ ಭವಿಷ್ಯದ ಕೋರ್ಸಿನ ಆಯ್ಕೆ ಇರುವುದರಿಂದ ವಿದ್ಯಾರ್ಥಿ ಉನ್ನತ ಶಿಕ್ಷಣದ ಅವಕಾಶಗಳಿಂದ ವಂಚಿತನಾಗಿದ್ದಾನೆ. ಧಾರ್ಮಿಕ ಭಾವನೆಗಳಿಗೆ ಧಕ್ಕೆ ಬರವಂತ ಚಟುವಟಿಕೆಯಲ್ಲಿ ಎಂದಿಗೂ ಯಾರೂ ತೊಡಗಿಸಿಕೊಳ್ಳಬಾರದು. ಇದು ಕೇವಲ ಬ್ರಾಹ್ಮಣ ಸಮುದಾಯಕ್ಕೆ ಮಾತ್ರವಲ್ಲ. ಇಡೀ ಹಿಂದೂ ಸಮಾಜವನ್ನೇ ಅಪಮಾನಗೊಳಿಸಿದಂತಾಗಿದೆ. ಈ ಘಟನೆಯಿಂದ ಬ್ರಾಹ್ಮಣ ಸಮಾಜ ಬಹಳ ನೊಂದಿದೆ. ಸರ್ಕಾರ ಈ ವಿಚಾರದಲ್ಲಿ ಮೀನಾಮೇಷ ಮಾಡದೇ, ಕೂಡಲೇ ತನಿಖೆ ನಡೆಸಿ ಮೂಲ ಸೂಚಕರನ್ನು ಪತ್ತೆಹಚ್ಚಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಂಡ ಬಗ್ಗೆ ತಿಳಿಸಬೇಕು ಎಂದು ಆಗ್ರಹಿಸಿದರು.

ಬ್ರಾಹ್ಮಣ ಸಮುದಾಯದ ಸೀನಂ ಭಟ್, ಎಚ್.ಪಿ.ಕಲ್ಲಂಭಟ್, ಶ್ರೀಪತಿ ಸೇರಿದಂತೆ ಅನೇಕ ಮುಖಂಡರು, ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ ಸಾಲಿಸಿದ್ದಯ್ಯಸ್ವಾಮಿ, ಗೊಗ್ಗ ಚನ್ನಬಸವರಾಜ, ಕೆ.ರವಿಶಂಕರ, ವಾಲ್ಮೀಕಿ ಸಮುದಾಯದ ಮುಖಂಡರು ಸೇರಿದಂತೆ ಅನೇಕ ಸಮುದಾಯಗಳ ಮುಖಂಡರು ಪ್ರತಿಭಟನೆಯಲ್ಲಿದ್ದರು.

> ಸಿ.ಇ.ಟಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಜನಿವಾರ ತೆಗೆಸಿರುವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದು ಕೊಳ್ಳಲಾಗುವುದು.
> – ಸಿದ್ದರಾಮಯ್ಯ, ಮುಖ್ಯಮಂತ್ರಿ



## ಮೈಕ್ರೋ ನ್ಯೂಸ್

### ಕೂಡ್ಲಿಗಿ ತಾಲೂಕಿನಲ್ಲಿ ಸಿಡಿಲಿಗೆ 3 ಮೇಕೆ ಸಾವು

**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲ್ಲೂಕಿನ ವಿವಿಧೆಡೆ ಭಾನುವಾರ ಸಂಜೆ ಗುಡುಗು ಸಹಿತ ಮಳೆ ಆಗಿದೆ. ಸಿಡಿಲು ಬಡಿದು ಹರವದಿ ಗ್ರಾಮದಲ್ಲಿ 3 ಮೇಕೆಗಳು ಸ್ಥಳದಲ್ಲೇ ಮೃತಪಟ್ಟಿವೆ.

ಹರವದಿ ಗ್ರಾಮದ ಕುಮಾರಸ್ವಾಮಿ ಅವರು ಮೇಕೆ ಮೇಯಿಸಲು ಹೊಲಗಳಿಗೆ ಹೋಗಿದ್ದಾಗ ಸಂಜೆ 5ರ ಸುಮಾರಿಗೆ ಗುಡುಗು ಸಹಿತ ಮಳೆ ಸುರಿದಿದೆ. ಈ ವೇಳೆ ಮೇಕೆಗಳು ಗಿಡದ ಆಸರೆಯಲ್ಲಿ ನಿಂತಾಗ, ಈ ಘಟನೆ ಸಂಭವಿಸಿದೆ. ಮೃತ ಮೇಕೆಗಳು ಕುಮಾರಸ್ವಾಮಿಗೆ ಸೇರಿದ 3 ಮೇಕೆಗಳು ಎನ್ನಲಾಗಿದೆ. ಈ ವೇಳೆಯಲ್ಲಿ ಗುಡೇಕೋಟೆ ಪೊಲೀಸ್ ಠಾಣೆಯ ಅಧಿಕಾರಿಗಳು, ಗ್ರಾಮ ಆಡಳಿತಾಧಿಕಾರಿಗಳು ಪಶು ವೈದ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

### ಏ.30 ರೊಳಗೆ ಪಡಿತರದಾರರು ಇ-ಕೆವೈಸಿ ಸಲ್ಲಿಸುವುದು ಕಡ್ಡಾಯ

**ಹಂಪಿ ಟೈಮ್ಸ್ ಹೊಸಪೇಟೆ**

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ವತಿಯಿಂದ ನೀಡಲಾಗಿರುವ ಪಡಿತರದಾರರಿಗೆ ಇ-ಕೆವೈಸಿ ನೊಂದಾಣಿ ಕಡ್ಡಾಯವಾಗಿದೆ. ಏಪ್ರಿಲ್.30 ರೊಳಗೆ ನಿಗಧಿತ ನ್ಯಾಯಬೆಲೆ ಅಂಗಡಿಗೆ ತೆರಳಿ ಇ-ಕೆವೈಸಿ ಸಲ್ಲಿಸಲು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಎಸ್ಸಿ, ಎಸ್ಟಿ ಹಾಗೂ ಇತರೆ ಮೀಸಲಾತಿಯವರಿದ್ದಲ್ಲಿ ಜಾತಿ ಪ್ರಮಾಣ ಪತ್ರ, ಅನಿಲ ಸಂಪರ್ಕ ಹೊಂದಿದ್ದಲ್ಲಿ ಮಾಹಿತಿ ನೀಡದ ಪಡಿತರ ಚೀಟಿದಾರರು ಗ್ರಾಹಕ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಿಗಧಿತ ನ್ಯಾಯಬೆಲೆ ಅಂಗಡಿಯಲ್ಲಿ ಉಚಿತವಾಗಿ ಸಲ್ಲಿಸಿ ತಂತ್ರಾಂಶದಲ್ಲಿ ದಾಖಲಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರೈತರು ಬೆಳೆದ ಬಿಳಿ ಜೋಳಕ್ಕೆ ಬೆಂಬಲ ಬೆಲೆ ನಿಗಧಿ

**ಹಂಪಿ ಟೈಮ್ಸ್ ಹೊಸಪೇಟೆ**

2024–25 ನೇ ಸಾಲಿನ ಹಿಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳ ಅನ್ವಯ ಎಫ್‌ಎಕ್ಯೂ ಗುಣಮಟ್ಟದ ಬಿಳಿಜೋಳ (ಹೈಬ್ರಿಡ್) ಮತ್ತು ಬಿಳಿಜೋಳ (ಮಾಲ್ದಂಡಿ) ಆಹಾರ ಧಾನ್ಯವನ್ನು ರೈತರಿಂದ ನೇರವಾಗಿ ಖರೀದಿಸಲು, ಜಿಲ್ಲೆಗೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯನ್ನು ಖರೀದಿ ಏಜೆನ್ಸಿಯಾಗಿ ನೇಮಿಸಲಾಗಿದ್ದು. ಪ್ರತಿ ಕ್ವಿಂಟಲ್‌ಗೆ ಬಿಳಿಜೋಳ(ಹೈಬ್ರೀಡ್) ರೂ.3371 ಹಾಗೂ ಬಿಳಿಜೋಳ(ಮಾಲ್ದಂಡಿ) ರೂ.3421 ರಂತೆ ಖರೀದಿಸಲಾಗುವುದು. ಈಗಾಗಲೇ ಮುಂಗಾರು ಋತುವಿನಲ್ಲಿ ಬೆಳೆದಿರುವ ಆಹಾರ ಧ್ಯಾನವನ್ನು ಆಯಾ ನೋಂದಣಿ ಖರೀದಿ ಕೇಂದ್ರಗಳಲ್ಲೇ ಧಾನ್ಯಗಳನ್ನು ಖರೀದಿಸಲಾಗುವುದು. ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೌಕರರ ಪ್ರಾಮಾಣಿಕ ಪ್ರಯತ್ನದಿಂದ ರಾಜ್ಯ ಆರ್ಥಿಕ ಪ್ರಗತಿ : ಸಿಎಂ

### ರಾಜ್ಯ ಸರ್ಕಾರಿ ನೌಕರರ ದಿನಾಚರಣೆ | ಪ್ರಶಸ್ತಿ ಪುರಸ್ಕೃತರ ಜವಾಬ್ದಾರಿ ಹೆಚ್ಚಿದೆ




■ **ಹಂಪಿ ಟೈಮ್ಸ್ ಬೆಂಗಳೂರು**

ಕರ್ನಾಟಕ ಪ್ರಗತಿಪರ ರಾಜ್ಯ. ಬಹುತೇಕ ಸರ್ಕಾರಿ ನೌಕರರ ಪ್ರಾಮಾಣಿಕ ಕರ್ತವ್ಯಪ್ರಜ್ಞೆಯಿಂದ ರಾಜ್ಯ ಆರ್ಥಿಕವಾಗಿ ಪ್ರಗತಿ ಸಾಧಿಸಿದೆ. ನಿಮ್ಮ ಕಾರಣದಿಂದ ರಾಜ್ಯ GST ಸಂಗ್ರಹದಲ್ಲಿ ದೇಶದಲ್ಲೇ ಎರಡನೇ ರಾಜ್ಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೆಚ್ಚುಗೆ ಸೂಚಿಸಿದರು.

ಸಿಬ್ಬಂದಿ ಮತ್ತು ಆಡಳಿತಾ ಸುಧಾರಣಾ ಇಲಾಖೆ, ರಾಜ್ಯ ಸರ್ಕಾರಿ ನೌಕರರ ಸಂಘ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಆಯೋಜಿಸಿದ್ದ ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯನ್ನು ಉದ್ಘಾಟಿಸಿ, 2023 ನೇ ಸಾಲಿನ ರಾಜ್ಯಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಸಮಾಜದ ನಾಲ್ಕೂ ಅಂಗಗಳಾದ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಮತ್ತು ಪತ್ರಿಕಾ ರಂಗದ ಕೆಲಸ ಸಂವಿಧಾನದ ಆಶಯವನ್ನು ಈಡೇರಿಸುವುದೇ ಆಗಿದೆ. ಸಂವಿಧಾನದ ಆಶಯದಂತೆ ಜಾತ್ಯತೀತ ಸಮಾಜ ನಿರ್ಮಿಸಿ, ಜಾತಿ ಅಸಮಾನತೆಯನ್ನು ಅಳಿಸುವುದಾಗಿದೆ ಎಂದರು.

ಬುದ್ಧ, ಬಸವ, ಗಾಂಧಿ ಹೇಳಿದ್ದನ್ನೇ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಅಳವಡಿಸಿದ್ದಾರೆ. ಇವರೆಲ್ಲರ ಆಶಯದಂತೆ ನಾವು ಸಂವಿಧಾನ ಪಾಲಿಸಿ ಕರ್ತವ್ಯ ನಿರ್ವಹಿಸಬೇಕು ಎಂದರು.

5.5 ಲಕ್ಷ ಸರ್ಕಾರಿ ನೌಕರರಿಗೆ ಇವತ್ತಿನ ಪ್ರಶಸ್ತಿ ಪುರಸ್ಕೃತರು ಸ್ಫೂರ್ತಿಯಾಗಬೇಕು. ಪ್ರಶಸ್ತಿ ಪುರಸ್ಕೃತರ ಜವಾಬ್ದಾರಿ ಈಗ ಹೆಚ್ಚಾಗಿದೆ. ಹೀಗಾಗಿ ಎಲ್ಲಾ ಸರ್ಕಾರಿ ನೌಕರರು ಕರ್ತವ್ಯಪ್ರಜ್ಞೆ ಹೆಚ್ಚಿಸಿಕೊಂಡು ಜನರ ಸೇವೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕು ಎಂದರು.

ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಸಿಗದ ಹೊರತು ನಮಗೆ ಸಿಕ್ಕಿರುವ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ಹೀಗಾಗಿ ಅಸಮಾನತೆಯನ್ನು ಬೇರು ಸಹಿತ ಕಿತ್ತು ಹಾಕುವ ದಿಕ್ಕಿನಲ್ಲಿ ನಾವು ಕರ್ತವ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು.

## ವಿಜಯನಗರ ಜಿಲ್ಲಾ ಆರೋಗ್ಯ ಇಲಾಖೆಯ ಎಂ.ಧರ್ಮನಗೌಡಗೆ ರಾಷ್ಟ್ರೀಯ ರತ್ನ ಪ್ರಶಸ್ತಿ ಪ್ರದಾನ



■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಆರೋಗ್ಯ ಇಲಾಖೆಯ ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ ಅವರ ವೈದ್ಯಕೀಯ ಕ್ಷೇತ್ರದ ಸೇವೆ ಗುರುತಿಸಿ, ಅಂತರರಾಷ್ಟ್ರೀಯ ಮಾನವ ಅಭಿವೃದ್ಧಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಭಾನುವಾರ ಪುಣೆಯಲ್ಲಿ ನಡೆದ ವಿವಿ ಘಟಿಕೋತ್ಸವದಲ್ಲಿ ರಾಷ್ಟ್ರೀಯ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಲ್ಚರಲ್ ಅಂಬಾಸಿಡರ್, ಎಎಸ್‌ಜಿಎಸ್ ಅಧ್ಯಕ್ಷರಾದ ಡಾ.ಮಹೇಶ್ ಗೌಡ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆ ಡಾ.ಶಶಿಕಲಾ ಬಿ. ರಾಷ್ಟ್ರೀಯ ಗಾಯಕಿ ಡಾ.ಬಿ.ವಿ.ಪದ್ಮಾವತಿ ಇತರರಿದ್ದರು.

## ಏ.23 ಗುಳೇದ ಲಕ್ಕಮ್ಮದೇವಿ ಜಾತ್ರೆ: ಮದ್ಯ ಮಾರಾಟ ನಿಷೇಧ.

■ **ಹಂಪಿ ಟೈಮ್ಸ್ ಹೊಸಪೇಟೆ**

ಕೂಡ್ಲಿಗಿ ತಾಲೂಕಿನ ಕೂಲಹಳ್ಳಿ ಗ್ರಾಮದಲ್ಲಿ ಏ.23 ರಂದು ಜರುಗಲಿರುವ ಗುಳೇದ ಲಕ್ಕಮ್ಮ ಜಾತ್ರೋತ್ಸವ ನಿಮಿತ್ತ ಏ.22 ರ ಸಂಜೆ 6 ಗಂಟೆಯಿಂದ ಏ.24 ರ ಬೆಳಿಗ್ಗೆ 6 ಗಂಟೆವರೆಗೆ ಕೂಡ್ಲಿಗಿ ಪಟ್ಟಣದಲ್ಲಿ ಮದ್ಯಾಪಾನ ಮಾರಾಟ ಮತ್ತು ಸಾಗಾಣಿಕೆ ನಿಷೇಧಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಆದೇಶ ಹೊರಡಿಸಿದ್ದಾರೆ.

# ನಿಂಬಳಗೆರೆಯಲ್ಲಿ ವಿಜೃಂಭಣೆಯಿಂದ ಜರುಗಿದ ಶ್ರೀ ಕಲ್ಲೇಶ್ವರ ರಥೋತ್ಸವ

■ **ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ನಿಂಬಳಗೆರೆ ಗ್ರಾಮದಲ್ಲಿ ಸೋಮವಾರ ಸಂಜೆ ಅಪಾರ ಭಕ್ತರ ಜಯ ಘೋಷ, ಹರ್ಷೋದ್ಗಾರದ ನಡುವೆ ಶ್ರೀ ಕಲ್ಲೇಶ್ವರ ಸ್ವಾಮಿ ರಥೋತ್ಸವ ಸಂಭ್ರದಿಂದ ಜರುಗಿತು.

ದೇವಸ್ಥಾನದಿಂದ ಪಲ್ಲಕ್ಕಿಯ ಭವ್ಯ ಮೆರವಣಿಗೆಯಲ್ಲಿ ಸಾಗಿ ಬಂದ ಸ್ವಾಮಿಯ ಉತ್ಸವ ಮೂರ್ತಿವು ರಥಕ್ಕೆ ಪ್ರದಕ್ಷಿಣೆ ಹಾಕಿಸಿ, ಬಗೆ ಬಗೆಯ ಹೂವು, ತಳಿರು, ತೋರಣಗಳಿಂದ ಪೂಜೆ ನೆರವೇರಿಸಿ ಸರ್ವಾಲಂಕೃತಗೊಂಡಿದ್ದ ರಥದಲ್ಲಿ ಸ್ವಾಮಿಯನ್ನು ಪ್ರತಿಷ್ಠಾಪನೆ ಮಾಡಲಾಯಿತು.

ನಂತರ ನಡೆದ ಸ್ವಾಮಿಯ ಪಟ ಹಾರಾಜಿನಲ್ಲಿ ನಿಂಬಳಗೆರೆ ಗ್ರಾಮದ ಪೂಜಾರಿ ಸಿದ್ದಲಿಂಗಪ್ಪ 68000 ರೂಪಾಯಿಗಳಿಗೆ ಪಟವನ್ನು ಪಡೆದುಕೊಂಡರು. ನಂತರ ನಡೆದ ಫಲಪುಷ್ಪವನ್ನು ಸುಂಕದಕಲ್ಲು ಹನುಮಂತಪ್ಪ 5001 ರೂಪಾಯಿಗಳಿಗೆ ಪಡೆದರು.

ಸವಾಲು ಪ್ರಕ್ರಿಯೆ ಮುಗಿಯುತ್ತಿದ್ದಂತೆ ಜಯಘೋಷದೊಂದಿಗೆ ಬೀದಿಯಲ್ಲಿ ಭಕ್ತರು ರಥವನ್ನು ಎಳೆದೊಯ್ದರು ನೆರೆದಿದ್ದ ಭಕ್ತರು ರಥಕ್ಕೆ ಬಾಳೆಹಣ್ಣು ಎಸೆದು ಕೈ ಮುಗಿದು ಭಕ್ತಿ ಸಮರ್ಪಿಸಿದರು. ಸಮಾಳ ನಂದಿಕೋಲು, ಮಂಗಳವಾದ್ಯಗಳು ರಥೋತ್ಸವಕ್ಕೆ ಮೆರಗು ನೀಡಿದ್ದವು.

ನಿಂಬಳಗೆರೆ, ಯರಮ್ಮನಹಳ್ಳಿ, ಮಂಗಾಪುರ, ಗಾಣಗಟ್ಟೆ, ಬೇಳದೇರೆ, ಹಾರಕಭಾವಿ, ಸುಂಕದಕಲ್ಲು ಸೇರಿದ್ದಂತೆ ವಿವಿಧ ಗ್ರಾಮದಳಿಂದ ಬಂದಿದ್ದ ಸಾವಿರಾರು ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು. ರಥೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆ, ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.



# ಕಾರೆ ಹಣ್ಣಿನ ರುಚಿಯು ಅಂದು–ಇಂದು ಬಾಲ್ಯ

■ ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ.

ಈಗಿನ ಕಾಲದ ಮಕ್ಕಳಿಗೆ ಹಣ್ಣುಗಳೆಂದರೆ ತಟ್ಟನೆ ನೆನಪಿಗೆ ಬರುವುದು ಸೇಬು, ಬಾಳೆ, ಕಿತ್ತಳೆ, ಪೇರಲು ಇತ್ಯಾದಿ ಮಾರುಕಟ್ಟೆಯಲ್ಲಿ ದುಡ್ಡು ಕೊಟ್ಟು ತರುವ ಹಣ್ಣುಗಳು.



ಆದರೆ ನಮ್ಮ ಬಾಲ್ಯದಲ್ಲಿ ಹೀಗಿರಲಿಲ್ಲ ಬಿಡಿ. ನಮಗೆ ಬಾಲ್ಯದಲ್ಲಿ ಹಣ್ಣುಗಳೆಂದರೆ ನೆನಪಿಗೆ ಬರುತ್ತಿದ್ದುದು ಋತುಮಾನಕ್ಕೆ ಸಹಜವಾಗಿ ಪುಕ್ಕಟೆಯಾಗಿ ಸಿಗುತ್ತಿದ್ದ ಸೀತಾಫಲ ತೊಂಡೆ ಹಣ್ಣು,ಕಾರೆಹಣ್ಣು, ಬಾರೆಹಣ್ಣು, ಕವಳೆಹಣ್ಣು ಸಿಂಬಳದ ಹಣ್ಣು, ಹತ್ತಿ ಹಣ್ಣು ಇತ್ಯಾದಿ. ಇವೆಲ್ಲವುಗಳು ನಮ್ಮ ಹೊಲದ ಬದುವಿನಲ್ಲಿ ಇಲ್ಲವೇ ಹೊಲದ ಪಕ್ಕದ ಚಿಕ್ಕ ಕುಟ್ರೆಗಳಲ್ಲಿ ಅನಾಯಾಸವಾಗಿ ದೊರೆಯುತ್ತಿದ್ದವು.

ಅದರಲ್ಲೂ ನಾನೀಗ ಹೇಳ ಹೊರಟಿರುವುದು ಕಾರೆ ಹಣ್ಣಿನ ಬಗ್ಗೆ. ನಮ್ಮ ಊರಿನ ಕೆಂಗಲು ಹೊಲದ ಬದುಗಳಲ್ಲಿ ಹೇರಳವಾಗಿ ಉತ್ತರೆ – ಹಸ್ತ ಮಳೆಗಳ ಕಾಲದಲ್ಲಿ ದೊರೆಯುತ್ತಿದ್ದ ಅತ್ಯಂತ ರುಚಿಕರವಾದ ಹಣ್ಣು ಈ ಕಾರೆ ಹಣ್ಣು. ಈ ಹಣ್ಣು ಬಿಡುವುದು ಕಾರೆ ಗಿಡದಲ್ಲಿ. ಈ ಗಿಡದ ತುಂಬಾ ಮುಳ್ಳು., ಚಿಕ್ಕ ಚಿಕ್ಕ ಎಲೆಗಳ ಮರೆಯಲ್ಲಿ ಅವಿತು ಕುಳಿತಿರುತ್ತಿದ್ದ ಹಳದಿ ಬಣ್ಣದ ಕಾಯಿಗಳನ್ನು ಕೈಗೆ ಮುಳ್ಳು ಚುಚ್ಚಿದರೂ ಲೆಕ್ಕಿಸದೆ ಸಂಗ್ರಹಿಸುತ್ತಿದ್ದೆವು.



ಮುಳ್ಳು ಚುಚ್ಚಿದಾಗ "ಕಾರೆ ಕಾರೆ ಕೆಂಗಣ್ಣ ಯಾರು ನೀನು ಮಂಗಣ್ಣ "ಅಂತ ಬಯ್ಯಲೋ ಖುಷಿ ಪಡಿಸಲೋ ನಮ್ಮ ಹಿರಿಯರು ಹಾಡುತ್ತಿದ್ದ ಹಾಡನ್ನು ಹಾಡುತ್ತಾ, ಮುಳ್ಳುಗಳಿಂದ ಆದ ನೋವನ್ನು ತಡೆದು ಕೊಳ್ಳುತ್ತಿದ್ದೆವು. ಹೀಗೆ ಸಂಗ್ರಹಿಸಿದ ಕಾರೆ ಹಣ್ಣುಗಳನ್ನು ಕೂಡಿಸಿ, ಅಷ್ಟೇ ಚಿಕ್ಕ ಗಾತ್ರದ ಕಲ್ಲುಗಳನ್ನು ಬೆರೆಸಿ, ಮನೆಯ ಅಡಕಲಿ ಗಡಿಗೆಗಳಲ್ಲಿ ಮಂಡೆಗೆ ಹಾಕಿದರೆ ಮೂರು ನಾಲ್ಕು ದಿನಗಳಲ್ಲಿ ಹದವಾಗಿ ಹಣ್ಣಾಗಿ ಬಿಡುತ್ತಿದ್ದವು. ಅವುಗಳನ್ನು ತಿನ್ನುತ್ತಿದ್ದರೆ ಸ್ವರ್ಗಕ್ಕೆ ಮೂರೇ ಗೇಣು. ಈ ಕಾರೆ ಗಿಡದಲ್ಲಿ ಹಣ್ಣುಗಳನ್ನು ಕೀಳಲು ಹೋಗಿ ಮುಳ್ಳುಗಳನ್ನು ಚುಚ್ಚಿಸಿಕೊಂಡಿದ್ದು, ಆ ಮುಳ್ಳುಗಳನ್ನು ಕಿತ್ತುಕೊಳ್ಳದೆ ಕೀವಾಗಿದ್ದು, ಅದನ್ನು ನೋಡಿದ ಅಪ್ಪ ಅಮ್ಮ ಪೆಟ್ಟು ಕೊಟ್ಟದ್ದನ್ನು ಮರೆಯಲಾಗದು. ಚಿಕ್ಕ ಗೋಲಿ ಗುಂಡಿನ ಆಕಾರದ ಕಾರೆ ಹಣ್ಣಿನ ರುಚಿಯನ್ನು ಪದಗಳಲ್ಲಿ ಹಿಡಿದಿಡಲು ಆಗುತ್ತಿಲ್ಲ. ನಿಜಕ್ಕೂ ಅದನ್ನು ತಿಂದೆ ಅನುಭವಿಸಬೇಕು. ಒಮ್ಮೊಮ್ಮೆ ಹಸಿವು ತಾಳಲಾಗದೆ ಕಾರೆ ಕಾಯಿಗಳನ್ನು ತಿಂದು, ಅವುಗಳು ಗಂಟಲಿಗೆ ಸಿಕ್ಕಿಕೊಂಡಾಗ ಅನುಭವಿಸಿದ ಯಾತನೆ ಅಷ್ಟಿಷ್ಟಲ್ಲ. ಒಮ್ಮೊಮ್ಮೆ ಅದೃಷ್ಟಕ್ಕೆ ಗಿಡದಲ್ಲಿಯೇ ಹಣ್ಣಾದ ಕಾರೆ ಹಣ್ಣು ಸಿಕ್ಕವೋ ಆ ಖುಷಿಯನ್ನು ತಿಂದೆ ಅನುಭವಿಸುತ್ತಿದ್ದೆವು. ಬಾಲ್ಯದಲ್ಲಿ ಶ್ರಾವಣ ಮಾಸದ ನಂತರ ದಸರಾ ದೀಪಾವಳಿವರೆಗೂ ನಮ್ಮ ಪಾಲಿನ ಪುಕ್ಕಟೆ ರುಚಿಕರ ಹಣ್ಣುಗಳ ಗುಂಪಿನಲ್ಲಿ ಹಳದಿ ರಾಣಿ ಕಾರೆ ಹಣ್ಣು ಇದ್ದೇ ಇದ್ದಿತು. ಹೀಗೆ ನಾವು ಹಣ್ಣುಗಳನ್ನು ಖುದ್ದು ಕಿತ್ತು, ಮಂಡೆಗೆ ಹಾಕಿ, ಹದಕ್ಕೆ ಬಂದಮೇಲೆ ತಿನ್ನಬೇಕೆಂಬ ಕಲೆ ಸಹಜವಾಗಿ ಸಿದ್ಧಿಸಿತ್ತು.

# ಬನ್ನಿಗೋಳದ ಬಾಡಿ ಬಿಲ್ಡರ್ ಮಾರುತೇಶ್ ಬಾಡಿಬಿಲ್ಡಿಂಗ್‌ನಲ್ಲಿ ರಾಷ್ಟ್ರಮಟ್ಟದ ಸಾಧನೆ

## ಬ್ಯಾಂಕಾಕ್‌ನಲ್ಲಿ ಮೇ–2025 ರಲ್ಲಿ ನಡೆಯುವ ಅಂತರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆ। ಭಾಗವಹಿಸಲು ಬೇಕಿದ ಅಗತ್ಯ ಆರ್ಥಿಕ ನೆರವು, ಬೆಂಬಲ

ಕಿತ್ತು ತಿನ್ನುವ ಬಡತನದ ನಡುವೆಯೂ ಏನನ್ನಾದರೂ ಸಾಧಿಸಬೇಕೆಂಬ ಹಂಬಲ ಮತ್ತು ಛಲ ಬರುವುದು ಬಹುಶಃ ಬಡವರಲ್ಲಿ ಮಾತ್ರ. ಅಂತಹ ಬಡವರನ್ನು ಕೈಬೀಸಿ ಕರೆಯುವ ಕ್ಷೇತ್ರ ಕ್ರೀಡಾಕ್ಷೇತ್ರ ಎಂದರೆ ತಪ್ಪಾಗಲಾರದು.

ದೇಹದಾಢ್ಯತೆ ಸಾಕಷ್ಟು ಶ್ರಮ, ಪೌಷ್ಟಿಕ ಆಹಾರ, ನಿಯಮಿತ ವೈಜ್ಞಾನಿಕ ತರಬೇತಿ, ವಿಶ್ರಾಂತಿ ಬೇಕಾಗುವಂತಹ ಕ್ರೀಡೆ ದಿನನಿತ್ಯದ ಸಮತೋಲಿತ ಆಹಾರ ಸೇವನೆಗೆ ಹೆಚ್ಚು ಹಣದ ಅವಶ್ಯಕತೆ ಇರುತ್ತದೆ. ಚಿಕ್ಕವಯಸ್ಸಿನಲ್ಲೇ ತಂದೆ–ತಾಯಿಯನ್ನು ಕಳೆದುಕೊಂಡ ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲೂಕಿನ ಬನ್ನಿಗೋಳದ ಮಾರುತೇಶ್ ಸಾಧನೆ ಮಾಡಿ ತೋರಿಸಿರುವ ಇಂದಿನ ನಮ್ಮ ಲೇಖನದ ಸಾಧಕ.

ಪೋಷಕರನ್ನು ಕಳೆದುಕೊಂಡರು ಧೃತಿಗೆಡದ ಬಾಲಕ ತಮ್ಮ ಬಂಧುಗಳ ಆಶ್ರಯವನ್ನು ಪಡೆದು ಕಾರಣಾಂತರಗಳಿಂದ ಅವರನ್ನು ತೊರೆದು ಹಗರಿಬೊಮ್ಮನಳ್ಳಿಯ ಹೋಟೆಲ್ನಲ್ಲಿ ತನ್ನ ಜೀವನವನ್ನು ಆರಂಭಿಸುತ್ತಾನೆ. ಪೋಷಕರ ಅಕ್ಕರೆಯ ಆಸರೆಯಲ್ಲಿ ಬೆಳೆದ ಇವರು ಹೋಟೆಲಿನಲ್ಲಿನ ವಸತಿ ಮತ್ತು ಊಟಕ್ಕೆ ಹೊಂದಿಕೊಳ್ಳದೆ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ನಂತರ ದನಕಾಯುವ ಕಾಯಕವನ್ನು ಮಾಡಿ ಜೀವನ ಸಾಗಿಸುತ್ತ ಮುಂದೆ ಹಗರಿಬೊಮ್ಮನಹಳ್ಳಿಯ ಯುವಕರ ತಂಡದೊಂದಿಗೆ ಮಹಾರಾಷ್ಟ್ರದ ರತ್ನಗಿರಿ ಊರಿಗೆ ತನ್ನ ಕುಲಕಸುವಾದ ಮೀನು ಹಿಡಿಯುವ ಕಾಯಕದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾರೆ.

ದೊಡ್ಡ–ದೊಡ್ಡ ಬೊಟುಗಳನ್ನೇರಿ ಸಮುದ್ರದ ಅಲೆಗಳನ್ನು ಮೀರಿ ನಿಂತು ಬೃಹತ್ ಗಾತ್ರದ ಬಲೆಗಳನ್ನು ತೋಳುಗಳಲ್ಲಿ ಬರ ಸೆಳೆಯುತ್ತಾರೆ. ಕಾಯಕದಲ್ಲಿ ನಿರತರಾದ ಇವರಿಗೆ ಒಂದಿಷ್ಟು ಕೂಲಿ ಹಣ ಹಾಗೂ ಶ್ರಮದ ಫಲವಾಗಿ ಹುರಿಗಟ್ಟಿದ ಸ್ನಾಯುಗಳು ಬೆಳೆಯುತ್ತವೆ. ಕಟ್ಟು ಮಸ್ತಾದ ಸದೃಢ ದೇಹವನ್ನು ಗಮನಿಸಿದ ತರುಣ ತನ್ನ 18ನೇ ವಯಸ್ಸಿನಲ್ಲಿ ಬಾಡಿ ಬಿಲ್ಡಿಂಗ್ ಮಾಡುವ ಹವ್ಯಾಸಕ್ಕೆ ಮಾರುಹೋಗಿ ಲಭ್ಯವಿದ್ದ ಸ್ಥಳೀಯ ವ್ಯಾಯಾಮ ಶಾಲೆಯಲ್ಲಿ ಕಸರತ್ತು ಮಾಡಲು ಆರಂಭಿಸುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ದುರಾದೃಷ್ಟವಶಾತ್ ಸುನಾಮಿ ಆರ್ಭಟಕ್ಕೆ ಸಮುದ್ರದ ಮೀನು ಹಿಡಿಯುವ ಕಾಯಕವನ್ನು ಬಿಟ್ಟು ಸ್ವಗ್ರಾಮಕ್ಕೆ ಬರಬೇಕಾಗುತ್ತದೆ.

ದೇಹದಾಢ್ಯ ಪಟುವಾಗ ಬೇಕೆಂಬ ಹುಚ್ಚು ಹಸಿವು ನೀಗಿಸಿಕೊಳ್ಳ ಬೇಕೆಂಬ ಕಿಚ್ಚು ಇವರನ್ನು ಬ್ಯಾಡಗಿ ಊರಿಗೆ ವಿಧಿ ಕರೆದುಕೊಂಡು ಬರುತ್ತದೆ.

ಡಾ.ಅಂಬಣ್ಣ ಇವರ ಸಹಾಯದಿಂದ ಮೆಣಸಿನಕಾಯಿ ಮಾರುಕಟ್ಟೆಯ ಕೋಲ್ಡ್ ಸ್ಟೋರೇಜ್ ನಲ್ಲಿ ಆಪರೇಟರ್ ಕೆಲಸಕ್ಕೆ ಸೇರಿಕೊಳ್ಳುತ್ತಾರೆ ಸ್ಥಳೀಯವಾಗಿಯೇ ಪೂಜಾರ್ ನಾರಾಯಣ್ ಜಿಮ್ನಲ್ಲಿ ಕಸರತ್ತು ಆರಂಭಿಸುತ್ತಾರೆ.

ಶ್ರದ್ಧೆಯ ಫಲ 2011ರಲ್ಲಿ 'ಮಿಸ್ಟರ್ ಬ್ಯಾಡಗಿ ಪ್ರಶಸ್ತಿ' ಗೆದ್ದು ಅಲ್ಲಿಂದ ಇವರ ಕ್ರೀಡಾ ಸಾಧನೆಯ ನಾಗಾಲೋಟ ಆರಂಭವಾಗುತ್ತದೆ.

ಸದ್ಯ ಮಾರುತೇಶ್ ಇವರಿಗೆ ದಿನವೊಂದಕ್ಕೆ 60 ರಿಂದ 80 ಮೊಟ್ಟೆ, 01 ಕೆ.ಜಿ ತರಕಾರಿ, 01 ಕೆಜಿ ಚಿಕನ್ ಇತ್ಯಾದಿ ಪೌಷ್ಟಿಕ ಆಹಾರ ಬೇಕು ಇದಕ್ಕೆ ಕನಿಷ್ಠ 1200 ರೂಪಾಯಿಗಳು ಖರ್ಚು ಇದ್ದೇ ಇರುತ್ತದೆ ಸ್ಪರ್ಧೆಗನುಗುಣವಾಗಿ ಇದರ ಬದಲಾವಣೆ ಆಗುತ್ತಿರುತ್ತದೆ.

ಸದ್ಯ ಹೊಸಪೇಟೆಯಲ್ಲಿ ಬಾಡಿಗೆ ಸ್ಥಳದಲ್ಲಿ ಸಣ್ಣ ಜಿಮ್‌ಮಾಡಿ ಕೊಂಡು ಅದರಲ್ಲಿ ಬಂದ ಹಣದಲ್ಲಿ ಕುಟುಂಬವನ್ನು ನಿಭಾಯಿಸಿ ಕೊಂಡು ಕ್ರೀಡೆಯನ್ನು ಮುಂದುವರೆಸುತ್ತಿದ್ದಾರೆ.

ಮಡದಿ ಪೂರ್ಣಿಮಾ ತನ್ನೆಲ್ಲ ಕನಸುಗಳನ್ನು ಬದಿಗಿಟ್ಟು ಗಂಡನ ಮಿಸ್ಟರ್ ಒಲಂಪಿಯಾ ಕನಸನ್ನು ನನಸು ಮಾಡಲು ಪಣತೊಟ್ಟು ಕೈಜೋಡಿಸಿದ್ದಾರೆ ಮಗಳು ನಿಥಿಲ ಕೂಡ ಪ್ರೇರಣೆಯಾಗಿ ಜೊತೆಗೂಡಿದ್ದಾಳೆ.

ಇಂತಹ ಸಾಧಕರ ಕಡೆ ಸರ್ಕಾರ, ಸ್ಥಳೀಯ ಶಾಸಕರು, ಕ್ರೀಡಾ ಪ್ರಾಯೋಜಕರು,ಸಂಘ–ಸಂಸ್ಥೆಗಳು, ಕ್ರೀಡಾ ಇಲಾಖೆ ಸಹಾಯ ಮಾಡಿ ಬೆಂಬಲಕ್ಕೆ ನಿಲ್ಲಬೇಕಾಗಿದೆ.

2024 ಡಿಸೆಂಬರ್–21ರಲ್ಲಿ ಮಲೇಷಿಯಾದ ಕೌಲಾಂಪುರ್ ಇಲ್ಲಿ ನಡೆದ ಏಷಿಯನ್ ಬಾಡಿ ಬಿಲ್ಡಿಂಗ್ ಚಾಂಪಿಯನ್ಶಿಪ್ +90 ದೇಹ ತೂಕ ವಿಭಾಗದಲ್ಲಿ ಭಾಗವಹಿಸಿ ಚಿನ್ನದ ಪದಕವನ್ನುಗಳಿಸಿ ಮುಂದೆ ಬ್ಯಾಂಕಾಕ್ ಇಲ್ಲಿ ಮೇ–2025 ರಲ್ಲಿ ನಡೆಯುವ ಅಂತರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆಯಾಗಿರುವ ಇವರಿಗೆ ಹೋಗಿ ಬರುವ ಹಾಗೂ ಇನ್ನಿತರೆ ವೆಚ್ಚಕ್ಕಾಗಿ 03 ಲಕ್ಷಕ್ಕೂ ಹೆಚ್ಚು ಹಣದ ಅವಶ್ಯಕತೆ ಇದ್ದು ಸಹಾಯಕ್ಕಾಗಿ ಮನವಿ ಮಾಡುತ್ತಿದ್ದಾರೆ. ಪ್ರತಿಭಾವಂತ ಯುವಕರನ್ನು ಉತ್ತೇಜಿಸಲು ಸಾರ್ವಜನಿಕರು, ಸಂಸ್ಥೆಗಳು, ಕ್ರೀಡಾ ಅಭಿಮಾನಿಗಳು, ಸಹೃದಯಿಗಳು ಇವರ ಮೊಬೈಲ್ ಸಂಖ್ಯೆ–7259825982ನೇರವಾಗಿ ಸಂಪರ್ಕಿಸಬಹುದು.

ನಿಮ್ಮೆಲ್ಲ ಕ್ರೀಡಾ ಸಾಧನೆಯ ಕನಸು ಕ್ರೀಡಾ ಪ್ರೇಮಿಗಳ ಸಹಕಾರದಿಂದ ಸಂಪೂರ್ಣವಾಗಿ ಮಿ.ಒಲಂಪಿಯಾ ಪದಕ ಪಡೆದು ಭಾರತದ ಕೀರ್ತಿ ಬೆಳಗಬೇಕೆಂದು ಹಾರೈಸುತ್ತೇವೆ.



### ಕ್ರೀಡಾ ಸಾಧನೆಗಳು

2024 (ಮಲೇಶಿಯಾ–ಕೌಲಂಪುರ್) ಫಿಟ್ನೆಸ್ ಇಂಟರ್ನ್ಯಾಷನಲ್ ಫೆಡೆರೇಶನ್ ಇವರ ಆಶ್ರಯದಲ್ಲಿ ನಡೆದ ಅಂತರಾಷ್ಟ್ರೀಯ ಬಾಡಿ ಬಿಲ್ಡಿಂಗ್ ಸ್ಪರ್ಧೆಯಲ್ಲಿ +90 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

2024 (ಮಧ್ಯಪ್ರದೇಶ)ಆಲ್ ಇಂಡಿಯಾ ಬಾಡಿ ಬಿಲ್ಡಿಂಗ್ ಫೆಡರೇಶನ್ ಇವರ ಸಹಯೋಗದಲ್ಲಿ ನಡೆದ ರಾಷ್ಟ್ರಮಟ್ಟದ ಬಾಡಿ ಬಿಲ್ಡಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ +90 ಕೆಜಿ ದೇಹ ತೂಕ ವಿಭಾಗದಲ್ಲಿ ಓವರ್ ಆಲ್ ಚಾಂಪಿಯನ್ ಮತ್ತು ಮೋಸ್ಟ್ ಮಸ್ಕ್ಯುಲರ್ ಜೊತೆಗೆ 'ಭಾರತ ಶ್ರೀ ಪ್ರಶಸ್ತಿ'ಪಡೆದಿರುತ್ತಾರೆ.

2023 (ಬೆಂಗಳೂರು)ಆಲ್ ಇಂಡಿಯಾ ಬಾಡಿ ಬಿಲ್ಡಿಂಗ್ ಫೆಡರೇಶನ್ ಮತ್ತು ಉತ್ತಮ ಕರ್ನಾಟಕ ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ರಾಷ್ಟ್ರಮಟ್ಟದ ಬಾಡಿಬಿಲ್ಡಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ +90 ಕೆಜಿ ದೇಹ ತೂಕ ವಿಭಾಗದಲ್ಲಿ ಓವರ್ ಆಲ್ ಚಾಂಪಿಯನ್ಶಿಪ್ನೊಂದಿಗೆ 'ಭಾರತ ಶ್ರೀ ಪ್ರಶಸ್ತಿ'ಪಡೆದಿರುತ್ತಾರೆ.

2021 (ಬೆಂಗಳೂರು–ಸುಂಕದಕಟ್ಟೆ) ಅಂತರಾಷ್ಟ್ರೀಯ ಬಾಡಿ ಬಿಲ್ಡರ್ ಏಕಲವ್ಯ ಪ್ರಶಸ್ತಿ ಪುರಸ್ಕೃತ ಜಿಮ್ ರವಿ ಹಾಗೂ ಕಬ್ಬ ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ರಾಷ್ಟ್ರಮಟ್ಟದ ಬಾಡಿ ಬಿಲ್ಡಿಂಗ್ ಸ್ಪರ್ಧೆಯಲ್ಲಿ 'ಭಾರತ ಶ್ರೀ'ಪ್ರಶಸ್ತಿ ಪಡೆದಿರುತ್ತಾರೆ.

ಹಲವು ರಾಜ್ಯಮಟ್ಟದ ದೇಹದಾಢ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ 12 ಚಿನ್ನ, 02 ಬೆಳ್ಳಿ ಪದಕಗಳನ್ನು ಗಳಿಸಿರುತ್ತಾರೆ.


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–



ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038



## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


# ಪುಸ್ತಕದ ಓದಿನಿಂದ ಆತ್ಮವಿಶ್ವಾಸ ದ್ವಿಗುಣ

## ಪುಸ್ತಕದಿಂದಲೇ ಮಸ್ತಕ ಬೆಳಗುತ್ತದೆ । ಮಸ್ತಕ ಬೆಳಗಾದರೆ ಜೀವನವು ಸರಾಗ

ಒಂದು ಪುಸ್ತಕ ನೂರು ಸ್ನೇಹಿತರಿಗೆ ಸಮ ಎನ್ನುವ ನಾಣ್ಣುಡಿಯಂತೆ ಪುಸ್ತಕ ಓದುವುದರಿಂದ ನಮಗೆ ಜ್ಞಾನ ವೃದ್ಧಿಯಾಗುತ್ತದೆ ಹಾಗೂ ನಮ್ಮ ಒಂಟಿತನ ವನ್ನು ಮರೆಸುತ್ತದೆ. ಪುಸ್ತಕಗಳು ಒಳ್ಳೆಯ ಸ್ನೇಹಿತ ಸ್ನೇಹಿತೆ ಇದ್ದಂತೆ . ನಮ್ಮ ದೇಶದ ಸಂಸ್ಕೃತಿ ಚರಿತ್ರೆ ಇತಿಹಾಸವನ್ನು ಮುಂದಿನ ಪೀಳಿಗೆಗೆ ರವಾನಿಸುವ ಸಾಧನವಾಗಿದೆ. ಪುಸ್ತಕ ಓದುವುದರಿಂದ ಕಲ್ಪನಾ ಶಕ್ತಿ ಹೆಚ್ಚುತ್ತದೆ. ಪುಸ್ತಕಗಳು ಪುರಾಣದ ಕಥೆ ಹಾಗೂ ಪುರಾತನ ಜೀವನ ಕ್ರಮಗಳ ಬಗ್ಗೆ ಅರಿವು ಮೂಡಿಸುತ್ತದೆ.

ಕೆಲವು ಪುಸ್ತಕಗಳು ನಮ್ಮ ಜೀವನದ ದಿಕ್ಕನ್ನೇ ಬದಲಿಸುತ್ತದೆ. ಅದರಲ್ಲಿರುವ ವಿಷಯಗಳು ಓದುಗನಿಗೆ ಸ್ಫೂರ್ತಿಯಾಗಿ ಅವನ ಯೋಚನಾ ಲಹರಿ ಮನೋಭಾವನೆ ಯನ್ನು ಬದಲಿಸುತ್ತದೆ. ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಿದಾಗ ನಮ್ಮ ಜ್ಞಾನ ಶಕ್ತಿ ಬೆಳೆಯುತ್ತದೆ ಮೊದ ಮೊದಲು ಪುಸ್ತಕ ಓದುವುದು ಹವ್ಯಾಸವಾಗಿದ್ದರೆ ನಂತರ ಅದು ನಮ್ಮ ಜೀವನದ ಭಾಗವಾಗಿ ಮಾರ್ಪಾಡಾಗುತ್ತದೆ.

ನಮ್ಮ ಮನಸ್ಸಿನ ದುಗುಡ ಹತಾಶೆ ಇವೆಲ್ಲವೂ ಪುಸ್ತಕ ಓದುವುದರಿಂದ ದೂರವಾಗಿ ಸಕಾರಾತ್ಮಕ ಭಾವನೆಗಳು ನಮ್ಮಲ್ಲಿ ಮೂಡುತ್ತವೆ.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper

ಜನರಲ್ಲಿ ಪುಸ್ತಕ ಓದುವ ಅಭಿರುಚಿ ಹಾಗೂ ಹವ್ಯಾಸವನ್ನು ಹೆಚ್ಚಿಸುವ ದೃಷ್ಟಿಯಿಂದ ಮತ್ತು ಲೇಖಕರಿಗೆ ಗೌರವ ಸಲ್ಲಿಸುವ ಸಲುವಾಗಿ ಹಾಗೂ ಉದಯೋನ್ಮುಖ ಬರಹಗಾರರಿಗೆ ಪ್ರೋತ್ಸಾಹಿಸುವ ದೃಷ್ಟಿಯಿಂದ 1995ರಲ್ಲಿ ಯುನೆಸ್ಕೋ ಏಪ್ರಿಲ್ 23 ರಂದು ವಿಶ್ವ ಪುಸ್ತಕ ಹಾಗೂ ಕೃತಿಸ್ವಾಮ್ಯದ ದಿನ ಎಂದು ಘೋಷಿಸಿದೆ.

ಆದರೆ ಇಂದಿನ ಆಧುನಿಕ ಯುಗದಲ್ಲಿ ಮೊಬೈಲ್ ಹಾಗೂ ಎಲೆಕ್ಟ್ರಾನಿಕ್ ಪರಿಕರಗಳ ಬಳಕೆಯಿಂದಾಗಿ ಪುಸ್ತಕ ಓದುಗರ ಸಂಖ್ಯೆ ಕಡಿಮೆಯಾಗಿದೆ. ಹಿಂದೆ ಮಾಹಿತಿ ಸಂಗ್ರಹಣೆಗಾಗಿ ಪುಸ್ತಕವನ್ನು ಓದುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಯಾವುದೇ ವಿಷಯದ ಬಗ್ಗೆ ಮಾಹಿತಿ ಬೇಕಾದರೆ ಮೊಬೈಲ್ ಕಿಲಿಮಣೆಯಲ್ಲಿ ಟೈಪಿಸಿದರೆ ಸಾಕು. ಆದರೆ ವಿಷಯದ ಅವಗಾಹನೆ ಆಳ ಹಾಗೂ ಅದರ ಮಿತಿ ಪುಸ್ತಕ ಓದಿದರೇನೇ ತಿಳಿಯುತ್ತದೆ. ಅಂತರ್ಜಾಲದ ಮಾಹಿತಿ ಯಿಂದ ಯಾವುದೇ ವಿಷಯದ ಮೇಲ್ಮೈ ತಿಳಿಯಬಹುದೇ ಹೊರತು ತಳಸ್ಪರ್ಶಿ ಅಧ್ಯಯನ ಪುಸ್ತಕಗಳ ಓದಿನಿಂದಲೇ ಸಾಧ್ಯ.

ಪುಸ್ತಕವು ನಮಗೆ ವಿಜ್ಞಾನ ತಂತ್ರಜ್ಞಾನದ ರಾಜಕೀಯ ಸಾಮಾಜಿಕ ಆರ್ಥಿಕ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ಮೂಡಿಸುತ್ತದೆ. ನಮ್ಮ ನೆಚ್ಚಿನ ಲೇಖಕ ಲೇಖಕಿಯ ಪುಸ್ತಕವನ್ನು ಓದುತ್ತಿದ್ದರೆ ಸಿಗುವ ಸಂತೋಷ ವರ್ಣನಾತೀತ.

ಚಿಕ್ಕ ಮಕ್ಕಳಿಗೆ ಮೊಬೈಲ್ ತೋರಿಸುವ ಬದಲು ಚಿತ್ರ ಸಮೇತ ಇರುವ ಪುಸ್ತಕವನ್ನು ತೋರಿಸುತ್ತಾ ಕಥೆಗಳನ್ನು ಹೇಳಿ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಬೇಕು. ಪುಸ್ತಕಗಳ ಓದು ನಮ್ಮ ಭಾಷಾ ಸಂಪತ್ತನ್ನು ಹೆಚ್ಚಿಸುವುದಲ್ಲದೆ ನಮಗೆ ಆತ್ಮವಿಶ್ವಾಸವನ್ನು ಮೂಡಿ ಸುತ್ತದೆ. ಹಣ ಸಂಪತ್ತನ್ನು ನಾವು ಕಳೆದುಕೊಳ್ಳಬಹುದು ಆದರೆ ವಿದ್ಯೆ ಹಾಗೂ ನಾವು ಸಂಪಾದಿಸಿದ ಜ್ಞಾನವನ್ನು ಯಾರೂ ಕಸಿದುಕೊಳ್ಳಲಾರರು. ಆದ್ದರಿಂದಲೇ ಪರಂಪರೆ ಯಿಂದ ಪುಸ್ತಕವನ್ನು ನಾವು ವಿದ್ಯಾಧಿ ದೇವತೆ ಯಾದ ಸರಸ್ವತಿ ಎಂದೇ ಪೂಜಿಸುತ್ತೇವೆ. ಪುಸ್ತಕಗಳ ಸ್ಥಾನ ನಾವು ಗುರು ಹಾಗೂ ದೇವತೆಗಳ ಸ್ಥಾನಮಾನಕ್ಕೆ ಸಮನಾಗಿ ನೀಡಿದ್ದೇವೆ. ಪುಸ್ತಕಗಳನ್ನು ಕೈ ಮುಟ್ಟಿ ಕಣ್ಣಿಗೆ ಹೊತ್ತಿಕೊಂಡು ನಮಸ್ಕರಿಸುವಪರಿಪಾಠವನ್ನುಇಟ್ಟುಕೊಂಡಿದ್ದೇವೆ. ಆ ಮಟ್ಟಿಗೆ ಪುಸ್ತಕವು ನಮಗೆ ಪೂಜ್ಯನೀಯವಾಗಿದೆ. ಪುಸ್ತಕದಿಂದಲೇ ಮಸ್ತಕ ಬೆಳಗುತ್ತದೆ. ಮಸ್ತಕ ಬೆಳಗಾದರೆ ಜೀವನವು ಸರಾಗ ವಾಗುತ್ತದೆ. ಬರಿಯ ಪುಸ್ತಕ ಓದಿ ಆ ವಿಚಾರಗಳನ್ನು ಮರೆತರೆ ಆಗುವುದಿಲ್ಲ ಅದನ್ನು ಜನಜೀವನದಲ್ಲಿ ರೂಢಿಸಿ ಕೊಳ್ಳಬೇಕು ಆಗ ಬದುಕು ಹಸನಾಗುತ್ತದೆ.

ಹಾಗಾಗಿ ಪುಸ್ತಕವನ್ನು ಓದೋಣ ವಿಚಾರಗಳನ್ನು ರೂಢಿಸಿಕೊಂಡು ಬೆಳೆಯೋಣ.



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕಾಗೆ

ಕಪ್ಪು ಕಾಗೆ,ಕಪ್ಪಾಗಿರುವ
ನಮ್ಮ ಮುದ್ದು ಕಾಗೆ!
ಅಲ್ಲಲ್ಲಿ ಮೈಬೂದು ವಿಶೇಷ
ಅದು ಸ್ವಲ್ಪ ಹಾಗೆ!!

ಆಹಾರ ತಿನ್ನಲು ಬೇಕು
ಕಾಗೆಗೆ ಅದುವೆ ಕೊಕ್ಕು!
ಆಹಾರ ಕಂಡರೆ ಕರೆವುದು
ಬಳಗ, ಇಲ್ಲವದಕೆ ಸೊಕ್ಕು!!

ಕಾಗೆಗೆ ಇಷ್ಟ ಸಸ್ಯಾಹಾರ
ಮಾಂಸಾಹಾರದ ಊಟ!
ಕೇಳಲು ಕರ್ಕಶ ಇದರ ಧನಿ
ಸೇರಿ ಕೂಗಲು ತನ್ನ ಕೂಟ!!

ಅತ್ತಿಂದಿತ್ತ ಇತ್ತಿಂದಿತ್ತ
ತಿರುಗುವುದು ದಿನವೆಲ್ಲ!
ವಿಶ್ರಾಂತಿ ಪಡೆವುದು ಸಂಜೆ
ಮರಳಿ,ಇಡೀ ಇರುಳೆಲ್ಲ!!

– ಶಿವರಾಜ್ ವಿ., ಹೊಸಪೇಟೆ.

### ಕರುಣೆ

ಕರುಣೆಯ ರೂಪ
ಮಮತೆಯ ಪ್ರತಿರೂಪ
ದೇವರ ಸ್ವರೂಪ
ನಮ್ಮನೆ ದೀಪ

ತ್ಯಾಗದ ಮೂರ್ತಿ
ಸೇವೆಯ ಸ್ಫೂರ್ತಿ
ಬೆಳೆಸಿದ ಸಂಸ್ಕೃತಿ
ಹಬ್ಬಲಿ ನಿನ್ನಯ ಕೀರ್ತಿ

ಜಗಕೆ ನಮ್ಮತಂದ
ಅಪ್ಪನ ತೋರಿಸಿದ
ದೇವರೇನ್ನೇ ಮರೆಸಿದ
ಹೊತ್ತಿಕೊಂಡು ತಿರುಗಿದ

ದೇವಿ ನೀವೇ ...
ಅಮ್ಮ....ಕರುಣಾಮಯಿ

– ಜಿ ಆರ್ ಬಸವರಾಜೇಶ್ವರಿ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**22–04–2025 – ಮಂಗಳವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶ್ರಾವಣ |
| ಯೋಗ | : ಶುಭ |
| ಕರಣ | : ತೈತುಲ |
| ಸೂರ್ಯೋದಯ | : 06:01:39 |
| ಸೂರ್ಯಾಸ್ತ | : 18:49:26 |
| ರಾಹು ಕಾಲ | : 15:38–17:13 |
| ಯಮಘಂಡ ಕಾಲ | : 09:14–10:50 |
| ಗುಳಿಕ ಕಾಲ | : 12:26–14:02 |



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 20–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.48 ಅಡಿ |
| ಒಳ ಹರಿವು | 232 ಕ್ಯುಸೆಕ್ |
| ಹೊರ ಹರಿವು | 336 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.992 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1578.62 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 155 ಕ್ಯುಸೆಕ್ |
| ಸಾಮರ್ಥ್ಯ | 3.838 ಟಿಎಂಸಿ |

# ಕೋಪದ ಬೆಂಕಿಗೆ ಶಾಂತಿಯ ಸಿಂಚನ

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಈ ಅರಿಷಡ್ವರ್ಗಗಳು ಜೀವನದ ಪ್ರತಿಹಂತದಲ್ಲಿ ನಮ್ಮನ್ನು ಕಾಡುತ್ತಲೇ ಇರುತ್ತವೆ. ಇವುಗಳಿಂದ ಸಂಪೂರ್ಣ ಬಿಡುಗಡೆ ಹುಲು ಮಾನವರಾದ ನಮಗೆ ಸಾಧ್ಯವಿಲ್ಲ. ಆದರೆ ಇವುಗಳನ್ನು ನಮ್ಮ ನಿಯಂತ್ರಣದಲ್ಲಿಟ್ಟುಕೊಂಡು ಬದುಕುವುದು ಜಾಣತನ.

ಯಶಸ್ವಿ ಬದುಕಿನ ಮೂಲಸೂತ್ರವೇ ಇದು. ಇವುಗಳಲ್ಲಿ ನಿತ್ಯ ನಮ್ಮ ಮನಸ್ಸನ್ನು ಬಾಧಿಸುವುದು ಕೋಪ.ವಯಸ್ಸಿನ ಭೇದವಿಲ್ಲದೆ ಎಲ್ಲರಿಗೂ ಕೋಪ ಬರುವುದು ಸಹಜ. ಆದರೆ ಕೋಪವೇ ನಮ್ಮ ಸ್ವಭಾವವಾದರೆ ಸಾಕಷ್ಟು ಅನಾಹುತಗಳಿಗೆ ಕಾರಣವಾಗುತ್ತದೆ.ಹಾಗಾದರೆ ನಮಗೆ ಯಾವಾಗ ಕೋಪ ಬರುತ್ತದೆ ಮತ್ತು ಆಗ ನಮ್ಮ ವರ್ತನೆಗಳು ಹೇಗಿರುತ್ತವೆ ಎಂಬುದನ್ನು ಒಮ್ಮೆ ಸ್ವ ಅವಲೋಕನ ಮಾಡಿಕೊಂಡರೆ ಬಹುಶಃ ಅದರ ಸಾಧಕ ಬಾಧಕಗಳು ಅರಿವಿಗೆ ಬರಬಹುದು.

ನಾನೊಬ್ಬಳು ತಾಯಿ ಮತ್ತು ಶಿಕ್ಷಕಿ. ತಾಯ್ತನದ ಪ್ರತಿ ಹಂತವೂ ಬಹಳಷ್ಟು ತಾಳ್ಮೆಯನ್ನು ಬಯಸುತ್ತದೆ. ಮಗುವಿನ ಹಟ, ಊಟ ತಿಂಡಿಯ ವಿಷಯ, ತುಂಟಾಟಗಳು, ಮನೆಯ ವಸ್ತುಗಳನ್ನು ಅಸ್ತವ್ಯಸ್ತಗೊಳಿಸುವುದು, ಓದು ಬರಹದಲ್ಲಿ ನಿರಾಸಕ್ತಿ ತೋರಿಸುವುದು ನನ್ನೊಳಗೆ ಕೋಪವನ್ನು ಹುಟ್ಟುಹಾಕುತ್ತದೆ. ಮಗು ಎಂದರೆ ಹಾಗೆ. ಅದು ತನ್ನ ಬೆಳವಣಿಗೆಯ ಸಹಜ ಪ್ರಕ್ರಿಯೆಯಲ್ಲಿ ಹಠ, ತುಂಟಾಟ ಮಾಡಲೇಬೇಕು. ಮಗುವಿನ ಆಸಕ್ತಿ , ಅಭಿರುಚಿ ಅರಿತು ಅದನ್ನು ಕಲಿಕೆಯಲ್ಲಿ ತೊಡಗಿಸಬೇಕು ಎಂಬ ಸಾಮಾನ್ಯ ಅರಿವಿನಿಂದ ನಾನು ಕೋಪದಿಂದ ಬಿಡುಗಡೆ ಪಡೆಯಬಹುದು. ಹಾಗೆಯೇ ಶಾಲಾ ತರಗತಿಯಲ್ಲಿ ವಿವಿಧ ಹಿನ್ನೆಲೆಯಿಂದ ಮಕ್ಕಳಿರುತ್ತಾರೆ. ಹಾಗೆ ಅವರ ಕಲಿಕಾ ಸಾಮರ್ಥ್ಯ ಕೂಡ ಭಿನ್ನವಾಗಿರುತ್ತದೆ. ಮಕ್ಕಳೊಂದಿಗೆ ಬೆರೆಯುವ, ಅವರ ತಪ್ಪುಗಳನ್ನು ತಿದ್ದಿ ಮಾರ್ಗದರ್ಶನ ನೀಡುವಾಗ ಆತ್ಮೀಯತೆ ಮುಖ್ಯವೇ ಹೊರತು ಕೋಪ ಅಥವಾ ದರ್ಪ ನಿಷ್ಪ್ರಯೋಜಕ ಎನ್ನುವುದು ನನ್ನ ಅನುಭವ.

ಕೋಪ ಬಂದಾಗ ಎಷ್ಟೋ ಬಾರಿ ನಾವು ನಾವಾಗಿ ಇರುವುದಿಲ್ಲ. ಏಕೆಂದರೆ ಕೋಪ ನಮ್ಮ ಮತಿಗೆ ಕವಿಯುವ ಮಬ್ಬು. ಆ ಕ್ಷಣದಲ್ಲಿ ನಮ್ಮ ತಿಳಿವಳಿಕೆ ಮಂಕಾಗಿ ಕೋಪದ ಕೈಯೇ ಮೇಲಾಗುತ್ತದೆ. ನಾವು ಸರಿ ತಪ್ಪುಗಳ ವಿವೇಚನೆಯನ್ನೇ ಕಳೆದುಕೊಳ್ಳುತ್ತೇವೆ. ಒಬ್ಬ ಸಭ್ಯ ವ್ಯಕ್ತಿ ಅವಾಚ್ಯ ಪದಗಳನ್ನು ಬಳಸಬಹುದು. ವಿಕೃತವಾಗಿ ಕ್ರೌರ್ಯ ತೋರಬಹುದು. ಇದರ ಪರಿಣಾಮದಿಂದ ಮನೆ ಮನಗಳ ಮಾನಸಿಕ ಶಾಂತಿ ಕೆಡುತ್ತದೆ. ಸಂಬಂಧಗಳಲ್ಲಿ ಬಿರುಕು ಕಾಣಿಸತೊಡಗುತ್ತದೆ. ಮಕ್ಕಳ ಮೇಲೆ ಸದಾ ಕೋಪಿಸಿಕೊಂಡು ರೇಗುವುದು, ಹೊಡೆಯುವುದು ಅವರ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತದೆ.

ಹಾಗಾದರೆ ಕೋಪವನ್ನು ನಿಯಂತ್ರಣ ಮಾಡಿಕೊಳ್ಳುವುದಾದರೂ ಹೇಗೆ. ಬಸವಣ್ಣನವರ ವಚನದಲ್ಲಿ ಹೇಳಿರುವಂತೆ


**ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯ**
**ತನಗಾದ ಆಗೇನು? ಅವರಿಗಾದ ಚೇಗೇನು?**
**ತನುವಿನ ಕೋಪ ತನ್ನ ಹಿರಿತನದ ಕೇಡು**
**ಮನದ ಕೋಪ ತನ್ನ ಅರುಹಿನ ಕೇಡು**
**ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ**
**ನೆರೆ ಮನೆಯ ಸುಡದು ಕಾಣ ಕೂಡಲಸಂಗಮದೇವಾ**



ಭವ್ಯ ಟಿ.ಎಸ್.
ಹೊಸನಗರ, ಶಿವಮೊಗ್ಗ

Scan For Digital Colourful
HAMPI TIMES E-paper

ಯಾರಾದರೂ ನಮ್ಮ ಮೇಲೆ ಕೋಪಿಸಿಕೊಂಡಾಗ ನಾವೂ ಕೋಪಗೊಳ್ಳುತ್ತೇವೆ. ಇದರಿಂದ ಮಾತಿನ ಚಕಮಕಿ ಆರಂಭವಾಗಿ ದ್ವೇಷಕ್ಕೆ ತಿರುತ್ತದೆ. ಇದರಿಂದ ದುರಂತಗಳು ಸಂಭವಿಸುತ್ತವೆ. ಇದರಿಂದ ಇಬ್ಬರಿಗೂ ಲಾಭವೂ ಇಲ್ಲ, ನಷ್ಟವೂ ಇಲ್ಲ. ಆದರೆ ಕೋಪ ಬಂದಾಗ ಆಡಿದ ಮಾತುಗಳು, ತೋರಿದ ವರ್ತನೆಗಳು ನಮ್ಮ ವ್ಯಕ್ತಿತ್ವಕ್ಕೆ ಕಪ್ಪುಚುಕ್ಕೆಗಳಾಗುತ್ತವೆ. ಕೋಪ ಎಂಬುದು ಮನವೆಂಬ ಮನೆಯಲ್ಲಿ ಹುಟ್ಟಿದ ಬೆಂಕಿಯಂತೆ. ಅದು ಮೊದಲು ಸುಡುವುದು ಮನೆಯನ್ನೇ. ಕೋಪ ಬಂದಾಗ ನಮ್ಮ ರಕ್ತದೊತ್ತಡ ಹೆಚ್ಚಾಗುತ್ತದೆ. ಇದು ನಮ್ಮ ಹೃದಯ, ಮೆದುಳಿಗೆ ಹಾನಿಯುಂಟು ಮಾಡುತ್ತದೆ. ಹಲವಾರು ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ನಮ್ಮ ದೇಹ ಆಗರವಾಗುತ್ತದೆ ಎಂಬುದು ಈ ವಚನದ ಸಾರವಾಗಿದೆ.



ಪೋಷಕರು ಮತ್ತು ಶಿಕ್ಷಕರು ಮಕ್ಕಳ ಮನಸ್ಸನ್ನು ಅರಿತು ಸ್ನೇಹಯುತವಾಗಿ ನಡೆಯುವುದರ ಮೂಲಕ ಕೋಪವನ್ನು ತಡೆಯಬಹುದು. ಇನ್ನು ನಮ್ಮ ಕುಟುಂಬದ ಸದಸ್ಯರೊಂದಿಗೆ ಮಾತಿಗೆ ಮಾತು ಬೆಳೆಸಬೇಕಾದ ಸಂದರ್ಭಗಳಲ್ಲಿ ವಿವೇಕದಿಂದ ಮೌನವಹಿಸುವುದು ಪರಿಸ್ಥಿತಿಯನ್ನು ತಿಳಿಗೊಳಿಸಬಲ್ಲದು. ಉದ್ಯೋಗದ ಸ್ಥಳಗಳಲ್ಲಿ ನಮ್ಮ ಶಿಸ್ತು, ಸಂಯಮ, ವಿವೇಚನಾಯುಕ್ತ ನಡೆ ನುಡಿಗಳಿಂದ ಕೋಪವನ್ನು ತಡೆಗಟ್ಟಬಹುದು.

**ಬೆಟ್ಟದ ಮೇಲೊಂದು ಮನೆಯ ಮಾಡಿ**
**ಮೃಗಗಳಿಗಂಜಿದೊಡೆಂತಯ್ಯ**
**ಸಮುದ್ರದ ತಡಿಯೊಳಗೊಂದು**
**ಮನೆಯ ಮಾಡಿ ನೆರೆತೊರೆಗಳಿಗಂಜಿದೊಡೆಂತಯ್ಯ**
**ಸಂತೆಯೊಳಗೊಂದು ಮನೆಯ ಮಾಡಿ**
**ಶಬ್ದಕ್ಕೆ ನಾಚಿದೊಡೆಂತಯ್ಯ**
ಲೋಕದಲ್ಲಿ ಹುಟ್ಟಿದ ಬಳಿಕ
ಸ್ತುತಿ ನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ
ಸಮಾಧಾನಿಯಾಗಿರಬೇಕು

ಎಂಬ ಅಕ್ಕಮಹಾದೇವಿಯ ವಚನದಂತೆ ಈ ಜಗತ್ತಿನಲ್ಲಿ ಜನಿಸಿದ ಬಳಿಕ ಹೊಗಳಿಕೆ, ತೆಗಳಿಕೆ ಸಹಜ. ಅದಕ್ಕೆ ಕೋಪ ತಾಳುವುದರಿಂದ ಪ್ರಯೋಜನವಿಲ್ಲ. ಎಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸುತ್ತಾ ಸಾಗಬೇಕು. ಕೋಪ ಬರುವ ಸಮಯದಲ್ಲಿ ಒಂದು ದೀರ್ಘ ಉಸಿರನ್ನು ತೆಗೆದುಕೊಂಡು ಮೌನ ಮತ್ತು ಶಾಂತಿಗೆ ಶರಣಾಗಬೇಕು. ಮೊಗದಲ್ಲಿ ಹೂನಗೆಯೊಂದನ್ನು ಅರಳಿಸಬೇಕು. ಆಗ ಕೋಪವೇ ನಾಚಿ ಹಿಮ್ಮೆಟ್ಟುವುದು.

# ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ಆರಂಭ

## ಎಸ್‌ಬಿಐನ ಸ.ಪ್ರ.ವ್ಯವಸ್ಥಾಪಕ ರಾಘವೇಂದ್ರರಾವ್ ಉದ್ಘಾಟನೆ । ಹೊಲಿಗೆ, ಮೊಬೈಲ್ ರಿಪೇರಿ ವಿವಿಧ ತರಬೇತಿ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಪುಣ್ಯಮೂರ್ತಿ ವೃತ್ತದ ಬಳಿಯಿರುವ ಹಳೇಯ ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನ ಆವರಣದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯನ್ನು ಎಸ್‌ಬಿಐನ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ರಾಘವೇಂದ್ರರಾವ್ ಬುಧವಾರ ಉದ್ಘಾಟಿಸಿದರು.



ಬಳಿಕ ಅವರು ಮಾತನಾಡಿ, ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ ಮತ್ತು ಯುವತಿಯರು ಸ್ವಾವಲಂಬಿಯಾಗಿ ಸ್ವಯಂ ಉದ್ಯೋಗವನ್ನು ಸೃಷ್ಟಿಸಿ ಕೊಂಡು ಆರ್ಥಿಕವಾಗಿ ಸಬಲರಾಗಲು ಸ್ವಯಂ ಉದ್ಯೋಗ ತರಬೇತಿ ಕೇಂದ್ರ ದಿಂದ ಸಹಕಾರಿ ಯಾಗಿದೆ. ತರಬೇತಿ ಸಂಸ್ಥೆಯಲ್ಲಿ ವಿಜಯನಗರದ ನಿರು ದ್ಯೋಗಿ ಯುವಕ ಯುವತಿ ಯರಿಗೆ ಸ್ವಯಂ ಉದ್ಯೋಗ ತರಬೇತಿ ಗಳಾದ ಮಹಿಳಾ ಮತ್ತು ಪುರುಷರ ಹೊಲಿಗೆ ತರಬೇತಿ, ಜ್ಯೂಟ್ ಬ್ಯಾಗ್ ತಯಾರಿಕೆ, ಅಗರ ಬತ್ತಿ ತಯಾರಿಕೆ, ಮೋಟಾರ್ ರಿವೈಂಡಿಂಗ್ ಮತ್ತು ಪಂಪ್‌ಸೆಟ್ ರೀಪೇರ್, ಮೊಬೈಲ್ ರಿಪೇರಿ ಸೇರಿದಂತೆ ವಿವಿಧ ತರಬೇತಿ ಗಳನ್ನು ಆಸಕ್ತ ಯುವಕ, ಯುವತಿ ಯರಿಗೆ ನೀಡಲಾಗುವುದು. ತರಬೇತಿ ಸಂಸ್ಥೆಯ ಪ್ರಯೋಜನವನ್ನು ಸದುಪಯೋಗಪಡಿಸಿಕೊಂಡು ಸ್ವಯಂ ಉದ್ಯೋಗ ಸೃಷ್ಟಿಕೊಳ್ಳಬೇಕಿದೆ ಎಂದರು.

ಈ ವೇಳೆ ಹೊಸಪೇಟೆ ಪ್ರಾದೇಶಿಕ ಕಚೇರಿಯ ಪ್ರಧಾನ ವ್ಯವಸ್ಥಾಪಕರಾದ ಅಮೀತ್ ಗೋಯಲ್, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರಾದ ಗಿರಿಧಾರಿ, ಸಹಾಯಕ ವ್ಯವಸ್ಥಾಪ ಕರಾದ ಧನಂಜಯ, ವ್ಯವಸ್ಥಾಪಕ ಈರಣ್ಣ, ಸಿಬ್ಬಂದಿ ಲಕ್ಷ್ಮೀಕಾಂತ ಇತರರಿದ್ದರು.

# ಏ.23 ವಿವಿಧ ಮಹನೀಯರ ಜಯಂತಿ ಪೂರ್ವಭಾವಿ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಮೇ 02 ರಂದು ಶಂಕರಾಚಾರ್ಯ ಜಯಂತಿ, ಮೇ 04 ರಂದು ಭಗೀರಥ ಜಯಂತಿ ಮತ್ತು ಮೇ 10 ರಂದು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ ಕುರಿತು ಚರ್ಚಿಸಲು ಏ.23 ರಂದು ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ.

ಏ.23 ರಂದು ಬೆಳಿಗ್ಗೆ 11.30 ಗಂಟೆಗೆ ಶಂಕರಾಚಾರ್ಯ ಜಯಂತಿ, ಮಧ್ಯಾಹ್ನ 12 ಗಂಟೆಗೆ ಭಗೀರಥ ಜಯಂತಿ, ಮಧ್ಯಾಹ್ನ 12.30 ಗಂಟೆಗೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆ ನಡೆಯಲಿದೆ. ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ಅಧ್ಯಕ್ಷತೆ ವಹಿಸುವರು. ಸಭೆಗೆ ಸಮುದಾಯದ ಮುಖಂಡರು, ಜಿಲ್ಲಾ ಮಟ್ಟದ ಅಧಿಕಾರಿಗಳು ತಪ್ಪದೇ ಹಾಜರಾಗಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ತಿಳಿಸಿದ್ದಾರೆ.

# ಏ.24 ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆ

## ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ: ಸಹಾಯಕ ಆಯುಕ್ತರಾದ ಪಿ.ಪ್ರಮೋದ್

■ ಹಂಪಿ ಟೈಮ್ಸ್ ಬಳ್ಳಾರಿ

ನಟಸಾರ್ವಭೌಮ, ವರನಟ ಡಾ.ರಾಜ್ ಕುಮಾರ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಇದೇ ಏ.24 ರಂದು ಜಿಲ್ಲಾಡಳಿತ ವತಿಯಿಂದ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ದಲ್ಲಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸ ಲಾಯಿತು.

ಸೋಮವಾರ ನಗರದ ಸಹಾಯಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಸಹಾಯಕ ಆಯುಕ್ತರಾದ ಪಿ.ಪ್ರಮೋದ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಏ.24 ರಂದು ಬೆಳಿಗ್ಗೆ 09 ಗಂಟೆಗೆ ನಗರದ ಡಾ. ರಾಜ್ ಕುಮಾರ್ ಉದ್ಯಾನವನದ ಬಳಿಯ ಡಾ.ರಾಜ್ ಕುಮಾರ್ ಅವರ ಪುತ್ಥಳಿಗೆ ಗಣ್ಯರಿಂದ ಮಾಲಾರ್ಪಣೆ ಮಾಡಲಾಗುವುದು. ಬಳಿಕ ಅಂದು ಸಂಜೆ 5 ಗಂಟೆಗೆ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಡಾ.ರಾಜ್ ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮತ್ತು ಅವರ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಯಿತು.

ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಡಾ.ರಾಜ್ ಕುಮಾರ್ ಅವರ ಅಭಿಮಾನಿಗಳು, ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಸೇರಿದಂತೆ ರಾಜಕೀಯ ಮುಖಂಡರು, ಎಲ್ಲ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ತಪ್ಪದೇ ಕಾರ್ಯಕ್ರಮಕ್ಕೆ ಹಾಜರಾಗಬೇಕು. ಡಾ.ರಾಜ್ ಕುಮಾರ್ ಅವರ ಕನ್ನಡ ಭಾಷಾಭಿಮಾನ, ಕಲಾ ಪ್ರತಿಭೆ ಎಲ್ಲರಿಗೂ ಮನಮುಟ್ಟುವಂತಾದರೆ ಜಯಂತಿ ಆಚರಣೆಗೂ ಅರ್ಥ ಬರುತ್ತದೆ ಎಂದು ಸಹಾಯಕ ಆಯುಕ್ತ ಪಿ.ಪ್ರಮೋದ್ ಅವರು ತಿಳಿಸಿದರು.



ಶಿಷ್ಟಾಚಾರದನ್ವಯ ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರನ್ನು ಆಹ್ವಾನಿಸಲಾಗುವುದು. ಕುಡಿಯುವ ನೀರಿನ ವ್ಯವಸ್ಥೆ, ಕಾರ್ಯಕ್ರಮ ಸ್ಥಳದಲ್ಲಿ ಸ್ವಚ್ಛತೆ ಕಾರ್ಯ ಕೈಗೊಳ್ಳಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ವಿವಿಧ ಸಂಘಟನೆಗಳ ಮುಖಂಡರು ಮಾತನಾಡಿ, ಡಾ.ರಾಜ್ ಕುಮಾರ್ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಬೇಕು. ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು. ಮಾಲಾರ್ಪಣೆ ಮಾಡಲು ಶಾಶ್ವತ ಏಣಿ ವ್ಯವಸ್ಥೆ ಮಾಡಬೇಕು ಎಂದು ಸಭೆಗೆ ತಿಳಿಸಿದರು.

ನಗರದಲ್ಲಿ ಡಾ.ರಾಜ್ ಕುಮಾರ್ ರಸ್ತೆ ಎಂದು ನಾಮಕರಣಗೊಂಡು 18 ವರ್ಷ ಕಳೆದಿದ್ದು, ಆ ರಸ್ತೆಯ ಪ್ರಾರಂಭದಲ್ಲಿ ಡಾ.ರಾಜ್ ಕುಮಾರ್ ರಸ್ತೆ ಎಂದು ಮಹಾದ್ವಾರ ನಿರ್ಮಿಸಬೇಕು ಎಂದು ಮುಖಂಡರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಕುರಿತು ಮಹಾನಗರ ಪಾಲಿಕೆಯ ಆಯುಕ್ತರಿಗೆ ಪತ್ರ ಬರೆಯಲಾಗುವುದು ಎಂದು ಸಹಾಯಕ ಆಯುಕ್ತ ಪಿ.ಪ್ರಮೋದ್ ಅವರು ತಿಳಿಸಿದರು.

ಡಾ.ರಾಜ್ ಕುಮಾರ್ ಅವರ ಜೀವನ ಚರಿತ್ರೆ ಕುರಿತು ತಿಳಿಸಲು ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸ ಆಯೋಜಿಸಬೇಕುಎಂದು ಮುಖಂಡರು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕ ವಿ.ಸಿ.ಗುರುರಾಜ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಿಷ್ಠಿ ರುದ್ರಪ್ಪ, ಸಿರಿಗೇರಿ ಪನ್ನರಾಜ್, ' ರಾಜ್ಯಾಧ್ಯಕ್ಷ ಕೆ.ಎರ್ರಿಸ್ವಾಮಿ ಸೇರಿದಂತೆ ಇತರರಿದ್ದರು.

# ಜಿಲ್ಲಾ ಮೇಲ್ವಿಚಾರಣೆ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ


ಸಮಾಜ ಕಲ್ಯಾಣ ಇಲಾಖೆಯಿಂದ ಏ.23 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಜಿಲ್ಲಾ ಮೇಲ್ವಿಚಾರಣಾ ಸಮಿತಿಯ ಸಭೆ ಏರ್ಪಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ್ ಅವರು ತಿಳಿಸಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038





## ಆನಂದ ಬಾಣ




# ನರೇಗಾದಿಂದ ಉದ್ಯೋಗ ಸೃಷ್ಟಿ : ಸಮೇರ್

### ಹೂಳೆತ್ತುವ ಕಾಮ ಗಾರಿ ಸ್ಥಳದಲ್ಲಿ ರೋಜ್ ಗಾರ್ ದಿವಸ್ ಆಚರಣೆ | ಗುಳೆ ತಪ್ಪಿಸಲು ಉದ್ಯೋಗ, ಹಿರಿಯ ನಾಗರಿಕರಿಗೆ ಗರ್ಭಿಣಿಯರಿಗೆ ಅರ್ಧದಷ್ಟು ಕೆಲಸ

■ **ಹಂಪಿ ಟೈಮ್ಸ್ ಬಳ್ಳಾರಿ**

ಕುರುಗೋಡು ತಾಲ್ಲೂಕಿನ ದಮ್ಮೂರು ಮತ್ತು ಸಿಂಧಿಗೇರಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಉದ್ಯೋಗ ಖಾತರಿ ಯೋಜನೆಯಡಿ ಕಾಲುವೆ ಹೂಳೆತ್ತುವ ಕಾಮ ಗಾರಿ ಸ್ಥಳದಲ್ಲಿ ರೋಜ್ ಗಾರ್ ದಿವಸ್ ಅನ್ನು ಸೋಮವಾರ ಆಚರಿಸಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೇರ್ ಅವರು ಮಾತನಾಡಿ, ಗ್ರಾಮೀಣ ಪ್ರದೇಶಗಳಿಗೆ ಮೂಲಸೌಕರ್ಯ ಕಲ್ಪಿಸುವ ಅಭಿವೃದ್ಧಿ ಹಾಗೂ ಗುಳೆ ತಪ್ಪಿಸಲು ಸ್ಥಳೀಯರಿಗೆ ಉದ್ಯೋಗ ಸೃಷ್ಟಿಸುವ ಉದ್ದೇಶದಿಂದ ನರೇಗಾ ಯೋಜನೆ ರೂಪಿಸಲಾಗಿದೆ. ನರೇಗಾದಿಂದ ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ ಹಲವು ಕಾಮಗಾರಿ ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಯೋಜನೆಯ ಯಶಸ್ವಿಗೆ ಕಾರ್ಮಿಕರ ಶ್ರಮವೇ ಮೂಲಾಧಾರವಾಗಿದೆ ಎಂದರು.



ಇದೇ ಸಂದರ್ಭದಲ್ಲಿ ಕೂಲಿ ಕೆಲಸಕ್ಕೆ ಹಾಜರಾದವರಿಗೆ ಮಾತ್ರ ಹಾಜರಾತಿ ನೀಡಬೇಕು. ಹಿರಿಯ ನಾಗರಿಕರಿಗೆ ಹಾಗೂ ಗರ್ಭಿಣಿಯರಿಗೆ, ವಿಶೇಷ ಚೇತನರಿಗೆ ಅರ್ಧದಷ್ಟು ಕೆಲಸ ನೀಡುವಂತೆ ಮಾಹಿತಿ ನೀಡಿದರು.

ಮನರೇಗಾ ಯೋಜನೆಯಡಿ ಕನಿಷ್ಠ ಶೇ.60 ಮಹಿಳೆಯರು ಭಾಗವಹಿಸುವಿಕೆ, ಎನ್‌ಎಂಎಂಎಸ್ ಆಪ್ ಹಾಜರಾತಿ ಕುರಿತು ತಿಳಿಸಿದರು. ನಾಲಾ ಹೂಳೆತ್ತುವ ಕಾಮಗಾರಿಯ ಅಳತೆಯ ಕುರಿತು ವಿವರಿಸಿದ ಅವರು, ಮಹಿಳಾ ಕಾರ್ಮಿಕರು ಕೂಸಿನ ಮನೆಯ ಸದುಪಯೋಗ ಪಡೆಯಬೇಕು ಎಂದರಲ್ಲದೇ, ಪಿಎಂಜೆಜೆವೈ ಮತ್ತು ಪಿಎಂಎಸ್‌ಬಿವೈ ವಿಮಾ ಯೋಜನೆ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕುರುಗೋಡು ತಾಲ್ಲೂಕು ಪಂಚಾಯತ್ ನ ಕಾರ್ಯನಿರ್ವಾಹಕ ಅಧಿಕಾರಿ ಕೆ.ವಿ.ನಿರ್ಮಲ, ಸಹಾಯಕ ನಿರ್ದೇಶಕ ಪಿ.ಶಿವರಾಮರೆಡ್ಡಿ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಲ್ಲಿಕಾರ್ಜುನ ಸೇರಿದಂತೆ ಗ್ರಾಪಂ ಕಾರ್ಯದರ್ಶಿ, ತಾಂತ್ರಿಕ ಸಂಯೋಜಕರು, ಐ.ಇ.ಸಿ ಸಂಯೋಜಕರು, ತಾಂತ್ರಿಕ ಸಹಾಯಕರು ಬಿ.ಎಫ್.ಟಿ, ಗ್ರಾ.ಪಂ ಸಿಬ್ಬಂಧಿಯವರು ಹಾಜರಿದ್ದರು.

## ವ್ಯಕ್ತಿ ಕಾಣೆ: ಪತ್ತೆಗೆ ಮನವಿ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಬಿ.ಎಂ.ಡಿ ಶಾಲಾ ಹಿಂಭಾಗದ ರೆಡ್ಡಿ ಬೀದಿಯ ವಾರ್ಡ್ ನಂ.12ರ ನಿವಾಸಿಯಾದ ಎಸ್.ಶಿವಪ್ರಾಕಶ್ ಎನ್ನುವ 47 ವರ್ಷದ ವ್ಯಕ್ತಿಯು ಮಾ.27 ರಂದು ಕಾಣೆಯಾಗಿದ್ದು,ಕನ್ನಡ ಮತ್ತು ತೆಲುಗು ಭಾಷೆ ಮಾತನಾಡುತ್ತಾನೆ. ಈ ಕುರಿತು ರೈಲ್ವೇ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ರೈಲ್ವೇ ಪೊಲೀಸ್ ಠಾಣೆಯ ಉಪ ನಿರೀಕ್ಷಕರು ತಿಳಿಸಿದ್ದಾರೆ.

ವ್ಯಕ್ತಿಯ ಬಗ್ಗೆ ಸುಳಿವು ಸಿಕ್ಕಲ್ಲಿ ರೈಲ್ವೇ ಪೊಲೀಸ್ ಠಾಣೆಯ ದೂ.08392-276063, ಪಿಎಸ್ ಮೊ.948082131 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಏ.28 ಕಿನ್ನಾಳ ಗ್ರಾಮದಲ್ಲಿ ಕಂದಾಯ ಅದಾಲತ್– ನ್ಯಾ. ಮಹಾಂತೇಶ್ ಎಸ್. ದರಗದ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮದಲ್ಲಿ ಏಪ್ರಿಲ್. 28 ರಂದು ಕಂದಾಯ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಕಿನ್ನಾಳ ಗ್ರಾಮದ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಕೊಪ್ಪಳದ ಮಹಾಂತೇಶ್ ಎಸ್. ದರಗದ ಹೇಳಿದರು.

ಅವರು ಸೋಮವಾರ ಕೊಪ್ಪಳ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಛೇರಿ ಸಭಾಂಗಣದಲ್ಲಿ ಕಿನ್ನಾಳ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಕಂದಾಯ ಅದಾಲತ್ ಕುರಿತು ಮಾಹಿತಿ ನೀಡಲು ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಕೊಪ್ಪಳ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಕಿನ್ನಾಳ ಗ್ರಾಮವನ್ನು ದತ್ತು ಪಡೆದ ನಂತರ ಈ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಏಪ್ರಿಲ್. 28 ರಂದು ಬೆಳಿಗ್ಗೆ 10 ಗಂಟೆಗೆ ಕಿನ್ನಾಳ ಗ್ರಾಮ ಪಂಚಾಯತಿಯಲ್ಲಿ ಕಂದಾಯ ಅದಾಲತ್ ಹಮ್ಮಿಕೊಳ್ಳಲಾಗಿದೆ. ಈ ಅದಾಲತ್‌ನಲ್ಲಿ ಸಂಧ್ಯಾ ಸುರಕ್ಷಾ, ವಿಧವಾ ವೇತನ, ವೃದ್ಧಾಪ್ಯವೇತನ, ಅಂಗವಿಕಲರ ವೇತನ, 371 ಜೆ ಪ್ರಮಾಣ ಪತ್ರ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ ರಾಜ್ಯ ಇಲಾಖೆ ವತಿಯಿಂದ ಉದ್ಯೋಗ ಖಾತ್ರಿ ಕಾರ್ಡಗಳ ವಿತರಣೆ, ಜನನ ಮರಣ ಪ್ರಮಾಣ ಪತ, ಇ-ಸ್ವತ್ತಿನ ದಾಖಲಾತಿ ಹಾಗೂ ನಿರಾಪೇಕ್ಷಣ ಪ್ರಮಾಣ ಪತ್ರ ಸೇರಿದಂತೆ ಕಂದಾಯ ಇಲಾಖೆಗೆ ಸಂಬಂಧಿಸಿದ ಇತರೆ ವಿಷಯಗಳ ಕುರಿತು ಈ ಕಂದಾಯ ಅದಾಲತನಲ್ಲಿ ಸಾರ್ವಜನಿಕರು ಮಾಹಿತಿ ಪಡೆಯಬಹುದಾಗಿದೆ. ಕಿನ್ನಾಳ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಂದಾಯ ಅದಾಲತನ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ರಥಮ ದರ್ಜೆ ಸಹಾಯಕ ಹನೀಫ್. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸುರೇಶ ಜಿ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಿಬ್ಬಂದಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಶಿಷ್ಯವೇತನದೊಂದಿಗೆ ತರಬೇತಿಗೆ ಮರು ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಸಮಾಜ ಕಲ್ಯಾಣ ಇಲಾಖೆಯಿಂದ ಐಐಎಸ್ಸಿ, ಐಐಟಿ ಮತ್ತು ಎನ್.ಐ.ಟಿ ಸಂಸ್ಥೆಗಳ ಮೂಲಕ ಆರ್ಟಿಫೀಷಿಯಲ್ ಇನ್‌ಟೆಲಿಜೆನ್ಸ್ & ಮಷಿನ್ ಲರ್ನಿಂಗ್ (Artificial Intelligence and Machine Learning)ನಂತಹ ವೃತ್ತಿಪರ ಕೋರ್ಸಗಳಲ್ಲಿ ಭಾಗವಹಿಸುವ ಪರಿಶಿಷ್ಟ ಪಂಗಡದ 200 ಇಂಜಿನಿಯರಿಂಗ್ ಪದವೀಧರರಿಗೆ ಶಿಷ್ಯವೇತನದ ಜೋತೆಗೆ ತರಬೇತಿ ನೀಡುವ ಸಂಬಂಧ ಮರು ಅರ್ಜಿ ಸಲ್ಲಿಸಲು ಕೋರಲಾಗಿದೆ.

ಏಪ್ರಿಲ್ 25 ರವರೆಗೆ ಅರ್ಜಿಗಳನ್ನು ಸ್ವೀಕರಿಸ ಲಾಗುತ್ತಿದೆ ಎಂದು ಕೊಪ್ಪಳ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರ ತಿಳಿಸಿದ್ದಾರೆ.